ಕರ್ನಾಟಕ ಸರ್ಕಾರ

ಸಂಖ್ಯೆ: ವಾಕೈ 12 ಜವಿಮ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:04.03.2015

ಇವರಿಂದ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಬೆಂಗಳೂರು-560 001

**ಇವರಿಗೆ:**

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು..01

**ಮಾನ್ಯರೆ,**

**ವಿಷಯ:** ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ವಿದ್ಯುತ್ ಮಗ್ಗ ಸಂಕೀರ್ಣಗಳನ್ನು ಸ್ಥಾಪಿಸುವ ಮಾರ್ಗಸೂಚಿ ಅನುಮೋದನೆ ಕುರಿತು.

**ಉಲ್ಲೇಖ:** ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ:ಕೈಜಇ/ಜವಳಿ/ಜತ-2/ಕೆ.ಎಸ್.ಟಿ.ಐ.ಡಿ.ಸಿ/2014-15 ದಿನಾಂಕ:18.09.2014

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ವಿದ್ಯುತ್ ಮಗ್ಗ ಸಂಕೀರ್ಣಗಳನ್ನು ಸ್ಥಾಪಿಸುವ ಮಾರ್ಗಸೂಚಿಯನ್ನು ಅನುಮೋದಿಸಿ, ಇದರೊಂದಿಗೆ ಲಗತ್ತಿಸಿದೆ. ಸದರಿ ಮಾರ್ಗಸೂಚಿಯನ್ವಯ ಕಾರ್ಯಕ್ರಮ ಅನುಷ್ಠಾನಗೊಳಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

797
11/3/15

ತಮ್ಮ ವಿಶ್ವಾಸಿ,

**(ಕೆ.ಬೋರಲಿಂಗಯ್ಯ)**
ಸರ್ಕಾರದ ಉಪಕಾರ್ಯದರ್ಶಿ(ಜವಳಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

12/3/15

**ರಾಜ್ಯದಲ್ಲಿ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ವಿದ್ಯುತ್ ಮಗ್ಗ ಸಂಕೀರ್ಣಗಳನ್ನು ಸ್ಥಾಪಿಸುವ ಮಾರ್ಗಸೂಚಿ ಹೊರಡಿಸುವ ಕುರಿತು.**

**ವಾಕೈ 12 ಜವಿಮ 2014, ದಿನಾಂಕ: 04.03.2015**

*********

2014–15ನೇ ಸಾಲಿನ ಅಯವ್ಯಯದಲ್ಲಿ ರಾಜ್ಯದಲ್ಲಿ ವಿದ್ಯುತ್‌ಮಗ್ಗ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟವನ್ನು ಹೆಚ್ಚಿಸಲು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮಗಳಲ್ಲಿ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಮೂಲಕ ವಿದ್ಯುತ್‌ಮಗ್ಗ ನೇಕಾರರ ಮೂಲ ಸೌಕರ್ಯ ಅಭಿವೃದ್ದಿಯೂ ಸಹ ಒಳಗೊಂಡಿರುತ್ತದೆ. ಕೆ.ಎಸ್.ಟಿ.ಐ.ಡಿ.ಸಿ ಸಂಸ್ಥೆಯು ವಿದ್ಯುತ್ ಮಗ್ಗ ಸಂಕೀರ್ಣವನ್ನು ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಕಾರ್ಯಕ್ರಮವನ್ನು ಜಾರಿಗೊಳಿಸಲು, ಹಾಗೂ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನಗಳಿಗೆ ಮಾರ್ಗಸೂಚಿಯನ್ನು ಈ ಕೆಳಕಂಡಂತೆ ಹೊರಡಿಸಲಾಗಿದೆ.

1. **ಅರ್ಹತೆ :**

- ಕರ್ನಾಟಕ ರಾಜ್ಯದಲ್ಲಿ ನಿಯಮಾನುಸಾರ ನೊಂದಾಯಿತ ಜಿಲ್ಲಾ/ರಾಜ್ಯ ಮಟ್ಟದ ವ್ಯಾಪ್ತಿ ಹೊಂದಿರುವ ಜವಳಿ ನಿಗಮ/ಮಹಾಮಂಡಳಿಗಳು ಅರ್ಹತೆ ಹೊಂದಿರುತ್ತವೆ.
- ನಿಗಮ/ಮಹಾಮಂಡಳಗಳಲ್ಲಿ ಕನಿಷ್ಟ 50–100 ಪ್ರಾಥಮಿಕ ಸಹಕಾರ ಸಂಘಗಳು/ ಜವಳಿ ಘಟಕಗಳು ಸದಸ್ಯರಾಗಿರತಕ್ಕದ್ದು.
- ನಿಗಮ/ಮಹಾಮಂಡಳಗಳ ಹೆಸರಿನಲ್ಲಿ ಕನಿಷ್ಟ ಎರಡು ಎಕರೆ ಖಾಲಿ ನಿವೇಶನ ಹೊಂದಿರತಕ್ಕದ್ದು.
- ವಿದ್ಯುತ್‌ಮಗ್ಗ ಸಂಕೀರ್ಣ ಸ್ಥಾಪನೆಗೆ ಸರ್ಕಾರದ ಅನುದಾನ ರೂ.200.00 ಲಕ್ಷಗಳನ್ನು ಹೊರತು ಪಡಿಸಿ ತಗಲುವ ಹೆಚ್ಚುವರಿ ವೆಚ್ಚವನ್ನು ಫಲಾನುಭವಿಗಳು/ಫಲಾನುಭವಿ ಸಂಸ್ಥೆ ಭರಿಸತಕ್ಕದ್ದು.

1. **ಕೆಳಗಿನ ಮೂಲ ಸೌಲಭ್ಯಗಳನ್ನು ಹೊಂದಿರತಕ್ಕದ್ದು:–**

- ರಸ್ತೆ.
- ಒಳ ಚರಂಡಿ ವ್ಯವಸ್ಥೆ.
- ನೀರು ಸರಬರಾಜು.
- ವಿದ್ಯುತ್ ಸರಬರಾಜು.
- 1 ಶೆಡ್‌ನಲ್ಲಿ ಕನಿಷ್ಠ 16 ವಿದ್ಯುತ್ ಮಗ್ಗಗಳನ್ನು ಅಳವಡಿಸಲು ಸಾಧ್ಯ ಇರುವಂತಹ ಶೆಡ್‌ಗಳು(ಗ್ರೂಪ್ ಆಫ್ 4 ಶೆಡ್ಸ್)(1000 ಚ.ಅಡಿ x4)
- ಒಂದು ಘಟಕದ ಕಟ್ಟಡ ಕನಿಷ್ಠ ಅಳತೆ (40*25) 1000 ಚ.ಅಡಿ.
- ಅವಶ್ಯಕತೆಗನುಗುಣವಾಗಿ ಇತರೆ ಮೂಲಭೂತ ಸೌಲಭ್ಯಗಳು.

..2

## 3. ಫಲಾನುಭವಿಗಳ ಅರ್ಹತೆ ಹಾಗೂ ಆಯ್ಕೆ ವಿಧಾನ:

ಫಲಾನುಭವಿ ಸಂಸ್ಥೆಯ ಆಯ್ಕೆಯನ್ನು ಇಲಾಖೆಯ ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳು, ಕರ್ನಾಟಕ ರಾಜ್ಯ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಅಧಿಕಾರಿಗಳು, ತಾಂತ್ರಿಕ ಅನುಭವ ಇರುವ ತಜ್ಞರು ಒಳಗೊಂಡಂತೆ ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಸಮಿತಿಯ ಸಭೆಯಲ್ಲಿ ಚರ್ಚಿಸಿ ಪ್ರಸ್ತಾವನೆಯ ಅರ್ಹತೆ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಆಯ್ಕೆ ಮಾಡತಕ್ಕದ್ದು.

1. ವಿದ್ಯುತ್ ಮಗ್ಗ ಸಂಕೀರ್ಣದಲ್ಲಿ ವಿದ್ಯುತ್ ಮಗ್ಗ ಘಟಕವನ್ನು ಸ್ಥಾಪಿಸಲು ಆಸಕ್ತಿ ಇರುವ ಫಲಾನುಭವಿಯು ವಿದ್ಯುತ್ ಮಗ್ಗ ನೇಯ್ಗೆಯ ಅನುಭವ/ತರಬೇತಿ ಹೊಂದಿರಬೇಕು.
2. ಫಾಲಾನುಭವಿಯು ತನ್ನ ಹೆಸರಿನಲ್ಲಿ ವಿದ್ಯುತ್‌ಮಗ್ಗ ಘಟಕವನ್ನು ಅಥವಾ ಇತರೆ ಯಾವುದೇ ತರಹದ ಕೈಗಾರಿಕಾ ಘಟಕವನ್ನು ಹೊಂದಿರಬಾರದು.
3. ಒಬ್ಬ ಫಲಾನುಭವಿಯು ಒಂದು ಘಟಕವನ್ನು ಮಾತ್ರ ಪಡೆಯಬಹುದಾಗಿರುತ್ತದೆ. (1000 ಚ.ಅಡಿಯ ಕಟ್ಟಡ)
4. ವಿದ್ಯುತ್ ಮಗ್ಗಗಳನ್ನು ಅಳವಡಿಸಲು ಹಾಗೂ ಘಟಕದ ಶೇ.50 ರಷ್ಟು ಹಣವನ್ನು ಬ್ಯಾಂಕ್ ಸಾಲ ಹಾಗೂ ಸ್ವಂತ ವಂತಿಕೆಯಿಂದ ಭರಿಸಲು ಶಕ್ತರಾಗಿರಬೇಕು.
5. ಫಲಾನುಭವಿಗಳು ವಿದ್ಯುತ್‌ಮಗ್ಗ ಸಂಕೀರ್ಣ ಸ್ಥಾಪಿಸುವ ಕ್ಷೇತ್ರ/ಜಿಲ್ಲೆಗೆ ಸೇರಿದವರಾಗಿರಬೇಕು.
6. ಪ.ಜಾ/ಪ.ಪಂ/ಅಲ್ಪ ಸಂಖ್ಯಾತರು, ಮಹಿಳೆಯರು ಹಾಗೂ ವಿಕಲಚೇತನರಿಗೆ ಪ್ರಾತಿನಿಧ್ಯ ನೀಡುವುದು.
7. ವಿದ್ಯುತ್‌ಮಗ್ಗ ಘಟಕ ಸ್ಥಾಪಿಸಲು ಆಸಕ್ತಿ ಇರುವ ಫಲಾನುಭವಿಯು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಫೋಟೋ, ಗುರುತಿನ ಚೀಟಿ, ಆದಾಯ/ಜಾತಿ ಪ್ರಮಾಣ ಪತ್ರ, ಯೋಜನಾ ವರದಿ ಹಾಗೂ ಬ್ಯಾಂಕ್ ಸಾಲದ ಒಪ್ಪಿಗೆ ಪತ್ರದೊಂದಿಗೆ ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
8. ಫಲಾನುಭವಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಿ ಜವಳಿ ಅಭಿವೃದ್ಧಿ ಆಯುಕ್ತರಿಂದ ಅನುಮೋದನೆ ಪಡೆಯತಕ್ಕದ್ದು.

## 4. ಷರತ್ತು ಮತ್ತು ನಿಬಂಧನೆಗಳು

1. ಘಟಕಕ್ಕೆ ತಗಲುವ ಒಟ್ಟು ವೆಚ್ಚದಲ್ಲಿ ಶೇಕಡ 50 ಭಾಗ ಫಲಾನುಭವಿ ಸಂಸ್ಥೆ ಭರಿಸಿದ ನಂತರ ಶೇಕಡ 50 ಭಾಗ ಸರ್ಕಾರದಿಂದ ಸಹಾಯಧನವಾಗಿ ಭರಿಸತಕ್ಕದ್ದು.
2. ಸಂಸ್ಥೆಯವರು 06 ತಿಂಗಳ ಅವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸತಕ್ಕದ್ದು.
3. ಯೋಜನೆಯ ಅನುಷ್ಠಾನಕ್ಕೆ ಅವಶ್ಯಕವಿರುವ ವಿವಿಧ ಇಲಾಖೆಗಳ ಅನುಮತಿಗಳನ್ನು ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
4. ಕಟ್ಟಡ ಕಾಮಗಾರಿಗಳಿಗೆ ಸ್ಥಳೀಯ ಸಂಸ್ಥೆಗಳಿಂದ ನಿಗದಿತ ಅನುಮೋದನೆ ಪಡೆಯತಕ್ಕದ್ದು.
5. ಸರ್ಕಾರದಿಂದ ಮಂಜೂರು ಮಾಡುವ ಅನುದಾನವನ್ನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಕಡ್ಡಾಯವಾಗಿ ವಿನಿಯೋಗ ಮಾಡತಕ್ಕದ್ದು.
6. ಅನುಮೋದಿತ ಯೋಜನಾ ವರದಿಯಂತೆಯೇ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

7. ಯೋಜನಾ ಅನುಷ್ಠಾನದಲ್ಲಿ ಬದಲಾವಣೆಗಳಿದ್ದಲ್ಲಿ, ಸರ್ಕಾರದ ಪೂರ್ವಾನುಮತಿ ಪಡೆದು ಅನುಷ್ಠಾನಗೊಳಿಸತಕ್ಕದ್ದು.
8. ಯಾವುದೇ ಕಾರಣಕ್ಕೆ ಯೋಜನೆಯ ಅನುಷ್ಠಾನ ಸ್ಥಗಿತಗೊಂಡಲ್ಲಿ ಸರ್ಕಾರದ ಅನುದಾನವನ್ನು ಸರ್ಕಾರವು ನಿಗದಿಪಡಿಸುವ ದರದ ಬಡ್ಡಿಯೊಂದಿಗೆ ನಿಗಮ/ಮಹಾಮಂಡಳದವರು ಸರ್ಕಾರಕ್ಕೆ ಹಿಂತಿರುಗಿಸತಕ್ಕದ್ದು.
9. ಸರ್ಕಾರವು ನಿಗದಿಪಡಿಸುವ ನಮೂನೆಯಲ್ಲಿ ಷರತ್ತು ಮತ್ತು ನಿಬಂಧನೆಗಳ ಬಾಂಡ್ ಅನ್ನು ಫಲಾನುಭವಿ/ಸಂಸ್ಥೆಯಿಂದ ಪಡೆಯತಕ್ಕದ್ದು.
10. ಯೋಜನೆಯ ಅನುಷ್ಠಾನ ಹಾಗೂ ನಿರ್ವಹಣೆಗೆ ಸಂಬಂಧಿಸಿದ ಜಿಲ್ಲೆಯ ಜವಳಿ ಇಲಾಖೆಯ ಜಂಟಿ/ಉಪ/ಸಹಾಯಕ ನಿರ್ದೇಶಕರು ಉಸ್ತುವಾರಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವುದು.

5. **ಯೋಜನೆಯನ್ನು ಕಾರ್ಯಗತಗೊಳಿಸಲು ಹಣ ಬಿಡುಗಡೆ :**

1. ಮೂಲ ಸೌಲಭ್ಯ ಅಭಿವೃದ್ಧಿ ಪಡಿಸುವ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳನ್ನು ಪಾಲಿಸತಕ್ಕದ್ದು.
2. ಉದ್ದೇಶಿತ ಪೂರ್ಣ ಯೋಜನೆಯ ಟೆಂಡರ್ ಪ್ರಕ್ರಿಯೆಗೆ ಸರ್ಕಾರದ ಅನುಮತಿ ಪಡೆಯತಕ್ಕದ್ದು.
3. ಉದ್ದೇಶಿತ ಕಟ್ಟಡ ನಿರ್ಮಿಸುವಲ್ಲಿ ಕಾಮಗಾರಿಯ ಪ್ರಗತಿಯನ್ನು ಆಧರಿಸಿ 4 ಕಂತುಗಳಲ್ಲಿ ಮೊದಲನೇ ಕಂತು ಶೇ.25, ಎರಡನೇ ಕಂತು ಶೇ.25, ಮೂರನೇ ಕಂತು ಶೇ.25 ಮತ್ತು ನಾಲ್ಕನೇ ಕಂತು ಶೇ.25 ರಷ್ಟು ಹಣವನ್ನು ಕಟ್ಟಡ ನಿರ್ಮಾಣ ಸಂಸ್ಥೆ/ಏಜೆನ್ಸಿಗೆ ಬಿಡುಗಡೆ ಮಾಡತಕ್ಕದ್ದು.

6. **ಇತರೆ ನಿಯಮಗಳು :**

1) ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಅಂದಾಜು ಮೊತ್ತವನ್ನು ಭರಿಸಲು ನಿಗಮ/ಮಹಾಮಂಡಳ/ಸಂಸ್ಥೆಯದ ಆಡಳಿತ ಮಂಡಳಿ ಠರಾವಿನೊಂದಿಗೆ ಖಾತ್ರಿ ನೀಡತಕ್ಕದ್ದು.
2) ಕಟ್ಟಡ ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಹಂತ ಹಂತವಾಗಿ ಹಣ ಬಿಡುಗಡೆ ಮಾಡುವುದು ಹಾಗೂ ದಾಖಲೆಯಾಗಿ ಫೋಟೋ ಪ್ರತಿ ಪಡೆದು ಇಡತಕ್ಕದ್ದು.
3) ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಅಧಿಕೃತ ರಿಜಿಸ್ಟರ್ಡ್ ಇಂಜಿನಿಯರ್‌ರವರಿಂದ ಕಂಪ್ಲೀಷನ್ ಸರ್ಟಿಫಿಕೇಟ್ ಪಡೆದು ದೃಢೀಕರಿಸುವುದು.
4) ಕಟ್ಟಡದ ಮೇಲೆ **"ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ----- ಸಾಲಿನಲ್ಲಿ ನಿರ್ಮಿಸಲಾದ ವಿದ್ಯುತ್ ಮಗ್ಗ ಸಂಕೀರ್ಣ"** ಎಂದು ನಾಮಫಲಕ ಬರೆಸತಕ್ಕದ್ದು.
5) ಸರ್ಕಾರದ ಅನುಮತಿ ಇಲ್ಲದೆ ಈ ಯೋಜನೆಯಡಿ ನಿರ್ಮಿಸಿದ ಆಸ್ತಿಯನ್ನು ಪರಭಾರೆ ಅಥವಾ ವರ್ಗಾವಣೆ ಮಾಡತಕ್ಕದ್ದಲ್ಲ.

6) ಉದ್ದೇಶಿತ ಕಟ್ಟಡವನ್ನು ವಿದ್ಯುತ್‌ಮಗ್ಗ ನೇಕಾರರು ವಿದ್ಯುತ್‌ಮಗ್ಗ ಘಟಕ/ಮಗ್ಗಪೂರ್ವ ಘಟಕ ಸ್ಥಾಪಿಸಲು ಮಾತ್ರ ಹಂಚಿಕೆ ಮಾಡತಕ್ಕದ್ದು.
7) ಸರ್ಕಾರವು ಕಾಲ ಕಾಲಕ್ಕೆ ವಿಧಿಸಬಹುದಾದ ಇತರೆ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಡತಕ್ಕದ್ದು

7. **ಪ್ರಸ್ತಾವನೆಯ ದಾಖಲಾತಿಗಳು :**

1. ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆಸಲಾದ ಆಯ್ಕೆ ಸಮಿತಿಯ ಠರಾವು
2. ವಿವರವಾದ ಯೋಜನಾ ವರದಿ.
3. ನಿಗಮ/ಮಹಾಮಂಡಳದ ನೋಂದಣಿ ಪ್ರಮಾಣ ಪತ್ರದ ಪ್ರತಿ.
4. ಮೆಮೊರ್‍ಯಾಂಡಂ ಆಫ್ ಆರ್ಟಿಕಲ್ಸ್ ಪ್ರತಿ..
5. ಆಡಳಿತ ಮಂಡಳಿಯ ಠರಾವು ಪ್ರತಿ
6. ಆಡಳಿತ ಮಂಡಳಿ ನಿರ್ದೇಶಕರ ಪಟ್ಟಿ
7. ನಿಗಮ/ಮಹಾಮಂಡಳಿಯ ನೋಂದಾಯಿತ ಸದಸ್ಯ ಘಟಕ/ಸಂಘಗಳ ಪಟ್ಟಿ.
8. ಖಾಲಿ ನಿವೇಶನದ ದಾಖಲಾತಿಗಳು(ಸೇಲ್/ಲೀಸ್ ಡೀಡ್, ಪಹಣಿ, EC)
9. ಕಟ್ಟಡದ ಅಂದಾಜು ಪಟ್ಟಿ
10. ಕಟ್ಟಡದ ನಕ್ಷೆ
11. ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಮೊತ್ತವನ್ನು ಸಂಸ್ಥೆಯು ಭರಿಸುವ ಬಗ್ಗೆ ಮುಚ್ಚಳಿಕೆ ಪತ್ರ.

(ಕೆ.ಬೋರಲಿಂಗಯ್ಯ)
ಸರ್ಕಾರದ ಉಪಕಾರ್ಯದರ್ಶಿ(ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ